

# ಮಲೈಕಾ ಮದ್ವೆಯಂತೆ!

ಮಲೈಕಾ ಅರೋರಾ ಯಾರಿಗೆ ಗೊತ್ತಿಲ್ಲ? ಬಾಲಿವುಡ್ ಸಿನಿಮಾಗಳಲ್ಲಿ ಸ್ಪೆಷಲ್ ಡಾನ್ಸ್‌ಗಳಿಂದಲೇ ಖ್ಯಾತಿ ಹೊಂದಿರುವ ನಟಿಯೆಂದರೆ ಮಲೈಕಾ. ಸಾಕಷ್ಟು ಹೊಸಬರು ಸ್ಪೆಷಲ್ ಡಾನ್ಸ್ ಅಂತ ಬಂದು ಹೋದರೂ ಮಲೈಕಾಳ ಖ್ಯಾತಿ ಕುಂದಿಲ್ಲ. ಶಾರೂಕ್‌ನಂತಹ ಮಹಾನಟನೇ ತನ್ನ ಸಿನಿಮಾದಲ್ಲಿ 'ಚೈಯ ಚೈಯ' ಹಾಡಿಗೆ ಕುಣಿಯಲು ಮಲೈಕಾಳೇ ಬೇಕು ಅಂದ. ಸಲ್ಮಾನ್ ಖಾನ್‌ನ ದಬಾಂಗ್‌ನಲ್ಲಿ 'ಮುನ್ನಿ ಬದ್‌ನಾಮ್ ಹುವಾ' ಹಾಡು ಆಕೆಯನ್ನು ಖ್ಯಾತಿಯ ಉತ್ತುಂಗಕ್ಕೆ ಒಯ್ದಿತು. ಅಕ್ಷಯ ಕುಮಾರ್, ಮಿಥುನ್, ಜಾನ್ ಅಬ್ರಹಾಂ ಮುಂತಾದವರು ನಟಿಸಿದ 'ಹೌಸ್‌ಫುಲ್2' ಚಿತ್ರದಲ್ಲಿ 'ಅನಾರ್ಕಲೀ ಡಿಸ್ಕೋ ಚಲೀ' ಎಂದು ಹಾಡಿ ಕುಣಿದ ಮಲೈಕಾ ಹೀರೊಗಳನ್ನೇ ಮೀರಿಸಿ ಆ ಸಿನಿಮಾಕ್ಕೆ ಪ್ರೇಕ್ಷಕರನ್ನು ಸೆಳೆದಳು. 45ರ ಹರೆಯದಲ್ಲೂ ಬಳುಕುವ ಬಳ್ಳಿಯಂತೆ ದೇಹಾಕಾರ ಕಾಪಿಟ್ಟುಕೊಂಡು ಸೆಕ್ಸಿಯಾಗಿರುವ ಮಲೈಕಾ ಕುಣಿತವೆಂದರೆ ಈಗಲೂ ಪಡ್ಡೆ ಹುಡುಗರು ಮುಗಿಬಿದ್ದು ನೋಡುತ್ತಾರೆ. ಮಲೈಕಾ ಡ್ಯಾನ್ಸ್ ಇದೆಯೆಂದರೆ ಆ ಸಿನಿಮಾ ಹೀರೊಯಿನ್‌ಗಳೂ ಮಂಕು ಹೊಡೆಯುವುದುಂಟು.

ಇಂತಿರ್ಪ ಮಲೈಕಾ ಶೀಘ್ರವೇ ಮದುವೆ ಆಗುತ್ತಿದ್ದಾಳೆ ಎಂದು ಬಾಲಿವುಡ್‌ನ ಗಲ್ಲಿ ತುಂಬಾ ಸುದ್ದಿ ಹಬ್ಬಿದೆ. ಆಕೆಯ ಜೊತೆಗೆ ಕಳೆದ ಒಂದು ವರ್ಷದಿಂದ ಡೇಟಿಂಗ್ ನಡೆಸುತ್ತಿರುವ ಅರ್ಜುನ್ ಕಪೂರ್‌ನೇ ಮದುವೆ ಗಂಡು ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಸಲ್ಮಾನ್ ಖಾನ್ ಸೋದರ, ನಟ, ನಿರ್ಮಾಪಕ ಅರ್ಬಾಜ್ ಖಾನ್ ಜೊತೆಗೆ 19 ವರ್ಷಗಳ ಕಾಲ ಸುಖೀ ಸಂಸಾರ ನಡೆಸಿದ ಬಳಿಕ 2017ರಲ್ಲಿ ಮಲೈಕಾ ಡೈವೋರ್ಸ್ ಪಡೆದುಕೊಂಡಳು. ಇಬ್ಬರಿಗೂ ಸಂಸಾರ ಬೋರಾಗಿತ್ತು ಎನ್ನುವುದು ಇಬ್ಬರೂ ಕೊಟ್ಟ ಸಮಜಾಯಿಷಿ. ಸಂಸಾರ ಬೋರಾದವರು ಮತ್ತೆ ಮದುವೆ ಆಗುತ್ತಾರೆಯೇ ಎಂದು ಪ್ರಶ್ನಿಸುವಂತಿಲ್ಲ. ಏಕೆಂದರೆ ಅತ್ತ ಅರ್ಬಾಜ್ ಕೂಡಾ ಇನ್ನೊಬ್ಬ ಸುಂದರಿಯೊಂದಿಗೆ ಮದುವೆಗೆ ಸಿದ್ಧನಾಗಿದ್ದಾನೆ.

ಮಲೈಕಾ ವಯಸ್ಸಿಗೆ ಹೋಲಿಸಿದರೆ ಅರ್ಜುನ್ ಕಪೂರ್ 12 ವರ್ಷ ಚಿಕ್ಕವನು. ಪ್ರೇಮಕ್ಕೆ ವಯಸ್ಸಿನ ಅಡ್ಡಿಯಿಲ್ಲ ಎನ್ನುವುದು ಅರ್ಜುನ್ ವಾದ. ಅದೂ ನಿಜವೇ. ಇಬ್ಬರ ಡೇಟಿಂಗ್ ವಿಷಯ ಎಲ್ಲರಿಗೂ ಗೊತ್ತಿರುವಂತಹದ್ದೇ. ಆದರೆ ಮದುವೆ ನಿಜಕ್ಕೂ ನಡೆಯುತ್ತದೆಯೆ? ಇತ್ತೀಚಿನ ರಿಯಾಲಿಟಿ ಷೋ ಒಂದರಲ್ಲಿ ಅರ್ಬಾಜ್ ಖಾನ್ ಈ ವರ್ಷವೇ ಮದುವೆ ಎಂದು ಹೇಳಿದ್ದಾನೆ. 'ಹಿಂದೆಲ್ಲ ಮದುವೆ ಅಂದರೆ ನಾನು ಉರಿದುಬೀಳುತ್ತಿದ್ದೆ. ಆದರೆ ಮಲೈಕಾ ಗೆಳತಿಯಾದ ಬಳಿಕ ನಾನೂ ಮದುವೆಯಾಗಬೇಕು ಎನ್ನುವ ಭಾವ ಹುಟ್ಟಿದೆ' ಎಂದಿದ್ದನಾತ. ಮದುವೆಯ ಬಗ್ಗೆ ಮಲೈಕಾ ಜೊತೆಗೆ ವಿಚಾರಿಸಿದರೆ ಆಕೆಯದ್ದು ನಿಗೂಢ ಉತ್ತರ. 'ಮದುವೆ ಅನ್ನುವುದು ನನ್ನ ವೈಯಕ್ತಿಕ ವಿಷಯ. ತೀರಾ ಖಾಸಗಿ ವಿಚಾರಗಳನ್ನು ನಾನು ಸಾರ್ವಜನಿಕವಾಗಿ ಮಾತನಾಡುವುದಿಲ್ಲ' ಎಂದಿದ್ದಾಳೆ ಆಕೆ. ಪತ್ರಕರ್ತರು ಈಗ ಮದುವೆಗೆ ಶುಭದಿನಾಂಕ ಯಾವುದು ಎನ್ನುವುದನ್ನು ಹುಡುಕುತ್ತಿದ್ದಾರಂತೆ.

ಮಲೈಕಾ ಹೋದಲ್ಲಿ ಬಂದಲ್ಲಿ ಬಾಡಿಗಾರ್ಡ್‌ನಂತೆ ಅರ್ಜುನ್ ಕಪೂರ್ ತಿರುಗಾಡುವುದು ನಡೆದೇ ಇದೆ. ಇತ್ತೀಚೆಗೆ ಶಾರೂಕ್ ಪತ್ನಿ ಗೌರಿ ಖಾನ್, ತನ್ನ ಹೊಸ ವಿನ್ಯಾಸದ ರೆಸ್ಟೋರೆಂಟ್ ಒಂದರ ಉದ್ಘಾಟನೆಗೆ ಒಂದು ಪಾರ್ಟಿ ನೀಡಿದ್ದಳು. ಪಾರ್ಟಿಗೆ ಬಾಲಿವುಡ್ ತಾರೆಯರ ದಂಡೇ ಸೇರಿತ್ತು. ಮಲೈಕಾ ಎಂದಿನಂತೆ ಅರ್ಜುನ್ ಜೊತೆಗೆ ಬಂದಳು. ಒಳಹೋಗುವ ಮುನ್ನ ಮುತ್ತಿದ ಛಾಯಾಗ್ರಾಹಕರಿಗೆ ಅಡ್ಡ ನಿಂತು, ಅವರನ್ನು ಸಮಾಧಾನಪಡಿಸಿ ಅರ್ಜುನ್, ಮಲೈಕಾಳನ್ನು ಕರೆದೊಯ್ದ. ಆತ ಧರಿಸಿದ ಬಿಳಿ ಟೀಶರ್ಟ್‌ನ ಎದೆಯ ಮೇಲೆ ತಲೆಬುರುಡೆಯ ದೊಡ್ಡ ಚಿತ್ರವೊಂದಿತ್ತು. ಅದನ್ನು ನೋಡಿಯೇ ಛಾಯಾಗ್ರಾಹಕರು ಹೆಚ್ಚು ಗದ್ದಲ ಮಾಡಲಿಲ್ಲ! ಮದುವೆ ಯಾವತ್ತೇ ಇರಲಿ, 'ಡೈವೋರ್ಸ್ ಬಳಿಕ ಭಾವನಾತ್ಮಕವಾಗಿ ಹೇಗೋ ಏನೋ ಎಂಬ ಚಿಂತೆಯಲ್ಲಿದ್ದೆ. ಆದರೆ ಈಗ ನಾನು ನೆಮ್ಮದಿಯಿಂದ ಇದ್ದೇನೆ' ಎಂದು ಮಲೈಕಾ ಹೇಳಿದ್ದು ನಿಜ. ಆ ನೆಮ್ಮದಿಗೆ ಅರ್ಜುನ್ ಕಪೂರ್ ಕಾರಣ ಎನ್ನುವುದನ್ನು ಆಕೆ ಬಾಯಿಬಿಟ್ಟು ಹೇಳಿಲ್ಲವಾದರೂ ಅದೂ ನಿಜ. ಒಟ್ಟಾರೆ 2019ರಲ್ಲಿ ಮೊದಲ ಮದುವೆಯ ಸುದ್ದಿ ಈ ಜೋಡಿದ್ದೇ ಇರಲಿದೆ ಎನ್ನುವುದು ಖಚಿತ.

■ ಬಿಂದು